# ಶ್ರಾವಣಿ ಮನಸಿಗೆ ಹತ್ತಿರವಾಗಿದ್ದಾಳೆ

**ಇಶಿಕಾ ಶೆಟ್ಟಿಗಾರ**
ಸ್ಟಾರ್ ಸುವರ್ಣ
'ಅವನು ಮತ್ತು
ಶ್ರಾವಣಿ'ಯ ಶ್ರಾವಣಿ



**◆ ಬೇರೊಬ್ಬರು ನಿರ್ವಹಿಸಿದ ಪಾತ್ರವನ್ನು ನೀವು ಹೇಗೆ ನಿರ್ವಹಿಸುತ್ತಿದ್ದೀರಿ?**

'ಅವನು ಮತ್ತು ಶ್ರಾವಣಿ'ಗೆ ಅವಕಾಶ ಬಂದ ತಕ್ಷಣವೇ ನನಗೆ ಬೇಡ ಅನ್ನಿಸಿತ್ತು. ಅದೇ ಉತ್ತರವನ್ನು ಎರಡನೇ ಬಾರಿಯೂ ಹೇಳಿದೆ. ಮೂರನೇ ಬಾರಿಗೆ ಮತ್ತೆ ಅವಕಾಶ ಬಂದಾಗ ಇದನ್ನು ತಪ್ಪಿಸಿಕೊಳ್ಳಬಾರದು ಎಂದನಿಸಿತು. ಆಗ ಈ ಪಾತ್ರವನ್ನು ಮಾಡಲು ಒಪ್ಪಿದೆ. ಆರಂಭದ ನಿರಾಕರಣೆಗೆ ರಿಪ್ಲೇಸ್‌ಮೆಂಟ್ ಅನ್ನುವುದೇ ಕಾರಣವಾಗಿತ್ತು. ಅದು ತುಂಬ ಸವಾಲಿನ ಕೆಲಸ ಎಂದೆನಿಸಿತ್ತು. ಏಕೆಂದರೆ ಅದನ್ನು ಬೇರೊಬ್ಬರು ನಿರ್ವಹಿಸಿದ್ದರು. ಆಗ ಅವರು ಆ ಪಾತ್ರವನ್ನು ಆಕ್ರಮಿಸಿಕೊಂಡು ಅದಕ್ಕೊಂದು ಆಯಾಮ ಕಲ್ಪಿಸಿರುತ್ತಾರೆ. ಅದನ್ನು ನಾನು ನನ್ನದಾಗಿಸಿಕೊಳ್ಳಬೇಕಿತ್ತು. ಈ ಪಾತ್ರ ತುಂಬ ಜವಾಬ್ದಾರಿ ತೋರಿಸುವಂತಹದ್ದು. ಪ್ರೀತಿಯನ್ನು ನೀಡುವ ಒಳ್ಳೆಯ ಗುಣವಂತೆ. ನನಗೆ ತುಂಬ ಚೆನ್ನಾಗಿ ಹೊಂದಾಣಿಕೆ ಆಗಿದೆ. ಹಾಗಾಗಿ ಈಗದು ಸವಾಲು ಎನ್ನುವುದಕ್ಕಿಂತ ಮನಸ್ಸಿಗೆ ಹತ್ತಿರವಾಗುವ ಪಾತ್ರ ಎಂದು ಅನ್ನಿಸಿದೆ.

**◆ ಪಾತ್ರಧಾರಿ ಬದಲಾದರೆ ಆಗುವ ತೊಂದರೆ ಏನು?**

ಜನಕ್ಕೆ ರಿಪ್ಲೇಸ್‌ಮೆಂಟ್ ಇಷ್ಟ ಆಗಲ್ಲ. ಒಂದು ಪಾತ್ರವನ್ನು ಮೊದಲಿನವರು ಸೆಟ್ ಮಾಡಿರುತ್ತಾರೆ. ಅದಕ್ಕೆ ಮತ್ತೊಬ್ಬರು ಮರುಜೀವ ತುಂಬುವುದು ಕಷ್ಟದ ಕೆಲಸವೇ ಸರಿ. ನಟರ ದೃಷ್ಟಿಯಿಂದ ಅದು ಹೇಗೆ ಸಮಸ್ಯೆಯೋ ವೀಕ್ಷಕರಿಗೂ ಹಾಗೇಯೇ ಅನ್ನಿಸುತ್ತದೆ. ಬದಲಾದ ಪಾತ್ರವನ್ನು ಅವರು ಅಷ್ಟು ಸುಲಭಕ್ಕೆ ಒಪ್ಪುವುದಿಲ್ಲ. ದಿನ ಕಳೆದಂತೆ ಪಾತ್ರವನ್ನು ಹೊಸ ಪಾತ್ರಧಾರಿಗಳು ಮೈಗೂಡಿಸಿಕೊಂಡು ವೀಕ್ಷಕರ ಮನಸಿಗೆ ನಾಟುವಂತೆ ಅಭಿನಯಿಸಿದರೆ ಇಷ್ಟಪಡುತ್ತಾರೆ. ಅದೇ ನನಗೂ ಸವಾಲಾಗುತ್ತದೆ ಎಂದುಕೊಂಡಿದ್ದೆ. ಆದರೆ ತಂಡ ನನಗೆ ಎಲ್ಲ ರೀತಿಯ ನೆರವು ನೀಡಿ ಪ್ರೋತ್ಸಾಹಿಸಿದ್ದರಿಂದ ಎಲ್ಲರೊಂದಿಗೆ ಬೆರೆತು ಪಾತ್ರವನ್ನು ಬೇಗ ನನ್ನದನ್ನಾಗಿಸಲು ಸಾಧ್ಯವಾಯಿತು.

**◆ ನಟನಾ ಜಗತ್ತು ನಿಮ್ಮನ್ನು ಸೆಳೆದದ್ದು ಹೇಗೆ?**

ಅಮ್ಮನ ಆಸೆಯಂತೆ ಅವರ ಸ್ನೇಹಿತರ ಮೂಲಕ ನನಗೆ ಬಣ್ಣದ ಪರಿಚಯ ಆಯಿತು. ಚಿಕ್ಕ ವಯಸ್ಸಿನಲ್ಲೇ 'ಮನದ ಮರೆಯಲ್ಲಿ' ಸಿನಿಮಾದಲ್ಲಿ ಬಾಲ ನಟಿಯಾಗಿ ಕಾಣಿಸಿಕೊಂಡೆ. ನಂತರ 'ಉರ್ವಿ', 'ಡಾ. 56', 'ಗರುಡ' ಸಿನಿಮಾಗಳಲ್ಲಿ ಮಾಡಿದೆ. ಇಷ್ಟೆಲ್ಲ ಮಾಡಿದರೂ ನಟನೆಯ ಬಗ್ಗೆ ವಿಶೇಷ ಒಲವೇನೂ ನನ್ನಲ್ಲಿ ಮೂಡಿರಲಿಲ್ಲ. ಏನೋ ಹೇಳಿದ್ದಾರೆ, ಮಾಡಬೇಕಲ್ಲ ಎಂದು ಮಾಡಿದ್ದೆ. ಮೊದಲಿನಿಂದ ನನಗೆ ಡಾನ್ಸ್ ಮೇಲೆ ಆಸಕ್ತಿ ಇತ್ತು. ಕಾಲೇಜು ಜೀವನವನ್ನು ಆರಂಭಿಸಿದ ನಂತರ ನಟನೆ ಮೋಹ ಹೆಚ್ಚಾಯಿತು. ಅಲ್ಲಿಂದ ಶುರುವಾದ ನಟನೆಯ ಪ್ರೀತಿ ಕಿರುತೆರೆಗೆ ಏಕೆ ಪ್ರವೇಶ ಮಾಡಬಾರದು ಎನ್ನುವ ಪ್ರಶ್ನೆಯನ್ನು ನನ್ನಲ್ಲಿ ಹುಟ್ಟಿಸಿತು. ಅದಕ್ಕೆ ಉತ್ತರ ಕಂಡುಕೊಳ್ಳುವ ನೆಪದಲ್ಲಿ ಲುಕ್ ಟೆಸ್ಟ್ ಕೊಟ್ಟಿದ್ದೆ. ಅದು ವೀಕ್ಷಕರ ಮನೆಗೆ ಹೋಗುವಂತೆ ಮಾಡಿದೆ.

**◆ ಸ್ವಯಂ ಪ್ರೀತಿಯಿಂದ ಬಂದ ನಂತರ ಈ ಕ್ಷೇತ್ರ ಹೇಗೆನಿಸುತ್ತಿದೆ?**

ಅಮ್ಮನ ಪ್ರೀತಿಗೆ ಸಿನಿಮಾ ಮಾಡಿದೆ ನಿಜ. ಹಾಗೆಂದು ಇಷ್ಟ ಇರಲಿಲ್ಲ ಎಂದಲ್ಲ. ಬಣ್ಣದ ಲೋಕದ ಬಗ್ಗೆ ನನಗೆ ಆರಂಭದಲ್ಲಿ ಅಷ್ಟಾಗಿ ಗೊತ್ತಿರಲಿಲ್ಲ ಅಷ್ಟೇ. ಈಗ ಅದರ ಮಹತ್ವ ಗೊತ್ತಾಗಿದೆ. ಇಲ್ಲಿ ಜನರ ಅಪಾರ ಪ್ರೀತಿ ಸಿಗುತ್ತದೆ. ಇದು ನಮಗೂ ಹುಮ್ಮಸ್ಸನ್ನು ತುಂಬಿಸುತ್ತದೆ. ಹೊಸ ಹೊಸ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು. ಮತ್ತೆ ಮತ್ತೆ ಸವಾಲುಗಳನ್ನು ಎದುರಿಸಿ ನಟಿಸಬೇಕು ಎನ್ನುವ ಆಸೆ ಹುಟ್ಟಿಸುತ್ತದೆ. ಬೆಳ್ಳಿತೆರೆ ಎನ್ನುವುದು ದೊಡ್ಡದಾದರೂ ವರ್ಷಕ್ಕೊಮ್ಮೆ ನಮ್ಮ ಸಿನಿಮಾ ತೆರೆ ಕಾಣಬಹುದು. ಸೀರಿಯಲ್ ಆದರೆ ನಾವೇ ನಿತ್ಯ ಅವರ ಮನೆಗೆ ಹೋಗುತ್ತೇವೆ. ಬರಹವನ್ನು ನೋಡುವುದಾದರೆ, ಸಿನಿಮಾದಲ್ಲಿ ಕಡಿಮೆ ಇರುತ್ತದೆ. ಕಿರುತೆರೆಯಲ್ಲಿ ಪುಟಗಟ್ಟಲೆ ಸಂಭಾಷಣೆ ಇರುತ್ತದೆ. ಜನರ ಪ್ರೀತಿ ಎರಡೂ ಕಡೆ ಸಿಗುತ್ತದೆ. ನಟನೆ ಸುಲಭದ ಕೆಲಸ ಅಲ್ಲ. ಶ್ರದ್ಧೆಯಿಂದ ಮಾಡಬೇಕು. ಇಷ್ಟಪಟ್ಟು ಮಾಡಿದರೆ ಮಾತ್ರ ಸಾಧ್ಯ.

**◆ ಸೌಂದರ್ಯ–ಆರೋಗ್ಯದ ದೃಷ್ಟಿಯಿಂದ ಜೀವನಶೈಲಿ ಹೇಗೆ ರೂಢಿಸಿಕೊಂಡಿದ್ದೀರಿ?**

ನಾವೆಲ್ಲರೂ ದೇಹ ಮತ್ತು ಆರೋಗ್ಯದ ಬಗ್ಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ದಿನದಲ್ಲಿ ಹತ್ತಾರು ಗಂಟೆ ಕೆಲಸ ಮಾಡುತ್ತಿರುತ್ತೇವೆ. ಅದಕ್ಕೆ ಒಳ್ಳೆಯ ಶಕ್ತಿ ಬೇಕು ಎಂದರೆ ಪೋಷಕಾಂಶ ಇರುವ ತರಕಾರಿ, ಹಣ್ಣುಗಳನ್ನು ಚೆನ್ನಾಗಿ ತಿನ್ನಬೇಕು. ನೀರನ್ನು ಚೆನ್ನಾಗಿ ಕುಡಿಯಬೇಕು. ಸಮಯ ಸಿಕ್ಕಾಗ ಜಿಮ್‌ಗೆ ಹೋಗುತ್ತಿದ್ದೇನೆ. ಧ್ಯಾನ ಮಾಡುತ್ತೇನೆ. ಪ್ರಾಣಾಯಾಮ ಮಾಡುವ ಅಭ್ಯಾಸವನ್ನು ರೂಢಿಸಿಕೊಂಡಿದ್ದೇನೆ. ಇದೆಲ್ಲ ನನಗೆ ಸಹಕಾರಿಯಾಗಿದೆ.

■ **ರಾಘವೇಂದ್ರ ಕೆ.**